# ದಿನಾಂಕ 10/9/2020 ನೇ ಗುರುವಾರ ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಬ್ರಾಡ್ ಬ್ಯಾಂಡ್ ಸಮಿತಿಯ 1ನೇ ಸಭೆಯ ಸಭಾ ನಡವಳಿಗಳು.

ಮಾನ್ಯ ಮುಖ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನೂ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು. ರಾಷ್ಟ್ರೀಯ ಬ್ರಾಡ್ ಬ್ಯಾಂಡ್ ಅಭಿಯಾನದ ಉದ್ದೇಶಗಳ ಅನುಸರಣೆಯ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ ನಂತರ ಈ ಕೆಳಕಂಡ ಸೂಚನೆಗಳನ್ನು ನೀಡಲಾಯಿತು.

| ಕ್ರಮ ಸಂಖ್ಯೆ | ವಿಷಯ | ತೆಗೆದುಕೊಳ್ಳಬೇಕಾದ ಕ್ರಮ | ಸಂಬಂಧಪಟ್ಟ ಇಲಾಖೆ |
|---|---|---|---|
| 1. | ರಾಷ್ಟ್ರೀಯ ಬ್ರಾಡ್ ಬ್ಯಾಂಡ್ ಅಭಿಯಾನದ ಅಡಿಯಲ್ಲಿ ದೂರ ಸಂಪರ್ಕ ಗೋಪುರಗಳ ಸಂಖ್ಯೆಯನ್ನು ಹೆಚ್ಚಿಸುವ ಬಗ್ಗೆ | 1. ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಅಳವಡಿಸಲಾಗಿರುವ ದೂರ ಸಂಪರ್ಕ ಗೋಪುರಗಳ ಅಕ್ಷಾಂಶ ಮತ್ತು ರೇಖಾಂಶಗಳ ಮಾಹಿತಿಯನ್ನು ಮಾತಂ, ಜೈತಂ, ವಿತಂ, ಇಲಾಖೆಗೆ ಒದಗಿಸಿಕೊಡಲು ಹಾಗೂ NEP Portal ಅನ್ನು ಬಳಸುವ ಅನುಮತಿಯನ್ನು ರಾಜ್ಯ ಸರ್ಕಾರಕ್ಕೆ ನೀಡುವಂತೆ ಹಿರಿಯ ಸಲಹೆಗಾರರು, LSA, Karnataka, DoT ರವರಿಗೆ ಮುಖ್ಯ ಕಾರ್ಯದರ್ಶಿಗಳು ಕೋರಿದರು. | LSA- Karnataka, DoT & ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ |
| | | 2. LSA- Karnataka, DoT ರವರು ಒದಗಿಸುವ ಮಾಹಿತಿಯ ಆಧಾರದ ಮೇಲೆ ರಾಜ್ಯ ವಿವಿಧ ಜಿಲ್ಲೆಗಳಲ್ಲಿ ದೂರ ಸಂಪರ್ಕ ಗೋಪುರಗಳನ್ನು ಸ್ಥಾಪಿಸಲು ಸೂಕ್ತ ಜಾಗಗಳನ್ನು GIS ನಕ್ಷೆಯಲ್ಲಿ ಇಂದೀಕರಿಸಲು KSRSAC ಸಂಸ್ಥೆಗೆ ನಿಯೋಜಿಸುವಂತೆ ಇಲಾಖೆಗೆ ಸೂಚಿಸಲಾಯಿತು. | KSRSAC & ಇ-ಆಡಳಿತ ಇಲಾಖೆ |

| | | | |
|---|---|---|---|
| | | 3. KSRSAC ಸಂಸ್ಥೆಯು ನೀಡುವ ಮಾಹಿತಿಯನ್ನು ಅಳವಡಿಸಿಕೊಂಡು ಮುಂದಿನ 5 ವರ್ಷಗಳಲ್ಲಿ ರಾಜ್ಯದಲ್ಲಿ ಸ್ಥಾಪಿಸಬೇಕಾಗಿರುವ ಗೋಪುರಗಳ ನೀಲನಕ್ಷೆಯನ್ನು ತಯಾರಿಸಲು ಐಟಿ, ಬಿಟಿ ಇಲಾಖೆಗೆ ಸೂಚನೆ ನೀಡಲಾಗಿತ್ತು ಹಾಗೂ ತಯಾರಿಸಿದ ನೀಲನಕ್ಷೆಯನ್ನು TAIPA ಸಂಸ್ಥೆಯು ಕಾರ್ಯಗತಗೊಳಿಸಲು ನೀಡುವಂತೆ ಸೂಚಿಸಲಾಯಿತು. | TAIPA & ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ |
| 2. | ರಾಜ್ಯದಲ್ಲಿ Optical Fibre ಸಂಪರ್ಕ ಹೆಚ್ಚಿಸುವ ಕುರಿತು. | 1. ಮುಖ್ಯ ಕಾರ್ಯದರ್ಶಿಯವರು, ಕರ್ನಾಟಕ ರಾಜ್ಯದಲ್ಲಿ ಈಗಾಗಲೇ Optical Fibre Cable ಅನ್ನು ಅಳವಡಿಸಲಾಗಿರುವ ಮಾಹಿತಿ ಹಾಗೂ ನಕ್ಷೆಯನ್ನು ಐ.ಟಿ.ಬಿ.ಟಿ. ಇಲಾಖೆಗೆ ನೀಡುವಂತೆ ಸೂಚಿಸಿದರು. | LSA- Karnataka, DoT, & ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ. |
| | | 2. LSA- Karnataka, DoT ರವರು ನೀಡುವ ಮಾಹಿತಿಯ ಆಧಾರದ ಮೇಲೆ ಕರ್ನಾಟಕ ರಾಜ್ಯದಲ್ಲಿ OFC Cable ಗಳನ್ನು ಅಳವಡಿಸಬೇಕಾದ ಸೂಕ್ತ ಜಾಗಗಳನ್ನು ಗುರುತಿಸಲು KSRSAC ಸಂಸ್ಥೆಯನ್ನು ನಿಯೋಜಿಸುವಂತೆ ಇ-ಆಡಳಿತ ಇಲಾಖೆಗೆ ಸೂಚಿಸಲಾಯಿತು. | KSRSAC & ಇ-ಆಡಳಿತ ಇಲಾಖೆ. |
| | | 3. KSRSAC ಸಂಸ್ಥೆ ನೀಡುವ ಮಾಹಿತಿಯನ್ನು ಅಳವಡಿಸಿಕೊಂಡು ಮುಂದಿನ 5 ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ Optical Fibre Cable ಗಳ ಬಗ್ಗೆ ನೀಲನಕ್ಷೆ ತಯಾರಿಸಲು ಐಟಿ, ಬಿಟಿ ಇಲಾಖೆಗೆ ಸೂಚಿಸಲಾಯಿತು. | TAIPA, ಸಿಓಎಐ(COAI) & ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ |

| | | | |
|---|---|---|---|
| | | 4. ಜೊತೆಗೆ, ಇನ್ನು ಮುಂದೆ ರಾಜ್ಯದಲ್ಲಿ ನೀಡಲಾಗುವ ಎಲ್ಲಾ Optical Fibre Cable / Telecom Tower ಅನುಮತಿಗಳಿಗೆ GPS ನಿರ್ದೇಶಾಂಕಗಳು (Coordinates) ಒಳಗೊಂಡಿರಬೇಕೆಂದು ಹಾಗೂ ಈ ಮಾಹಿತಿಯನ್ನು ಪೌರಾಡಳಿತ ನಿರ್ದೇಶನಾಲಯ ಅಭಿವೃದ್ಧಿಪಡಿಸುತ್ತಿರುವ Online Web Portal ನಲ್ಲಿ upload ಮಾಡಲು ಸೂಚಿಸಲಾಯಿತು. | ಪೌರಾಡಳಿತ ನಿರ್ದೇಶನಾಲಯ & ಸ್ಥಳೀಯ ಸಂಸ್ಥೆಗಳು |
| 3. | ರಾಜ್ಯದಲ್ಲಿ ಎಲ್ಲ ಗ್ರಾಮಗಳಿಗೆ ಬ್ರಾಡ್ ಬ್ಯಾಂಡ್ ಸಂಪರ್ಕ ಹಾಗೂ ಮನೆಮನೆಗೆ fibre ಸಂಪರ್ಕ ಕಲ್ಪಿಸುವ ಸಂಬಂಧ. | 1. ರಾಜ್ಯದಲ್ಲಿ KSWAN ಯೋಜನೆಯಡಿಯಲ್ಲಿ ಈಗಾಗಲೇ ಅಳವಡಿಸಲಾಗಿರುವ ಬ್ರಾಡ್ ಬ್ಯಾಂಡ್ ಮತ್ತು Optical Fibre ಸಂಪರ್ಕದ ಮಾಹಿತಿಯನ್ನು ಮತ್ತು ನಕ್ಷೆಯನ್ನು ಐ.ಟಿ.ಬಿ.ಟಿ. ಇಲಾಖೆಗೆ ನೀಡುವಂತೆ ಇ-ಆಡಳಿತ ಇಲಾಖೆಗೆ ನಿರ್ದೇಶಿಸಿದರು. | ಸಿಆಸುಇ - ಇ-ಆಡಳಿತ ಇಲಾಖೆ. |
| | | 2. ಸಿಆಸುಇ - ಇ-ಆಡಳಿತ ಇಲಾಖೆಯು ನೀಡುವ ಮಾಹಿತಿಯ ಆಧಾರದಮೇಲೆ ಈಗಾಗಲೇ ಅಳವಡಿಸಿರುವ Optical Fibre ಸಂಪರ್ಕವನ್ನು ಉಪಯೋಗಿಸಿಕೊಂಡು, ಇನ್ನಿತರ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವಂತೆ DoT - Karnataka, ರವರಿಗೆ ಸೂಚಿಸಲಾಯಿತು. | DoT - Karnataka. |

| | | | |
|---|---|---|---|
| 4. | ದೂರಸಂಪರ್ಕ ಗೋಪುರಗಳಿಗೆ ಹಾಗೂ Optical Fibre Cables ಗಳಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಹಾಲಿ ಇರುವ ನಿಯಮಗಳಿಗೆ ತಿದ್ದುಪಡಿ ಹೊರಡಿಸುವ ಬಗ್ಗೆ. | 1. ನಗರಾಭಿವೃದ್ಧಿ ಇಲಾಖೆಯು 2019ನೇ ಸಾಲಿನಲ್ಲಿ ದೂರ ಸಂಪರ್ಕ ಗೋಪುರಗಳಿಗೆ ಸಂಬಂಧಿಸಿದಂತೆ ಹೊರಡಿಸಿರುವ "Karnataka Installation of New Telecommunication Infrastructure Tower Regulations 2019" ಅನ್ನು ಹಾಗೂ 'Optical Fibre Cable" ಗೆ ಸಂಬಂಧಿಸಿದಂತೆ, 2015ನೇ ಸಾಲಿನಲ್ಲಿ ಹೊರಡಿಸಿರುವ ಕರಡು ನಿಯಮಗಳಿಗೆ ಸ್ಥಳೀಯ ಸಂಸ್ಥೆಗಳ ಆರ್ಥಿಕ ಸ್ಥಿತಿಯನ್ನು ಹಾಗೂ ಸಾರ್ವಜನಿಕರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು, ಈ ಎರಡು ನಿಯಮಗಳಿಗೆ ಪರಿಶೀಲಿಸಿ ಸೂಕ್ತವಿದ್ದಲ್ಲಿ ತಿದ್ದುಪಡಿ ಹೊರಡಿಸಲು ನಗರಾಭಿವೃದ್ಧಿ ಇಲಾಖೆಗೆ ಮುಖ್ಯ ಕಾರ್ಯದರ್ಶಿಗಳು ಸೂಚನೆ ನೀಡಿದರು. | ನಗರಾಭಿವೃದ್ಧಿ ಇಲಾಖೆ. |
| | | 2. ಜೊತೆಗೆ, ಈ ಎರಡೂ ನಿಯಮಗಳು ಕೇವಲ ನಗರ ಸ್ಥಳೀಯ ಸಂಸ್ಥೆಗಳಿಗೆ ಅನ್ವಯವಾಗುತ್ತಿದ್ದು, ಇದನ್ನು ಗ್ರಾಮೀಣ ಪ್ರದೇಶಗಳಿಗೆ ಅಳವಡಿಸಿಕೊಳ್ಳಲು 15 ದಿನಗಳೊಳಗಾಗಿ ಕರಡು ಅಧಿಸೂಚನೆಯನ್ನು ಹೊರಡಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸೂಚಿಸಲಾಯಿತು. | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. |
| | | 3. ಮೇಲೆ ತಿಳಿಸಿರುವ ನಿಯಮಗಳಿಗೆ ತಿದ್ದುಪಡಿ ಹೊರಡಿಸಲು ಸಂಬಂಧಪಟ್ಟ ಇಲಾಖೆಗಳು ಹಾಗೂ ಸಂಸ್ಥೆಗಳ ಸಭೆಯನ್ನು ಆಯೋಜಿಸುವಂತೆ ಐ.ಟಿ.ಬಿ.ಟಿ. ಇಲಾಖೆಗೆ ಸೂಚಿಸಲಾಯಿತು. | ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ |

| | | | |
|---|---|---|---|
| 5. | ಇನ್ನಿತರೆ ವಿಷಯಗಳು | ಗೋಪುರ ಮತ್ತು ಮೂಲಭೂತ ಸೌಕರ್ಯಗಳ ಪೂರೈಕೆದಾರರ ಸಂಘದವರು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಮುಖ್ಯ ಕಾರ್ಯದರ್ಶಿಗಳು ಈ ಕೆಳಕಂಡಂತೆ ಸೂಚಿಸಿದರು:<br><br>1. ದೂರ ಸಂಪರ್ಕ ಗೋಪುರಗೆ ಅನುಮತಿ ನೀಡುವ ಸಂದರ್ಭದಲ್ಲಿ Occupancy Certificate ಬದಲಿಗೆ Structural Stability-Certificate ಪಡೆದುಕೊಳ್ಳುವ ಬಗ್ಗೆ ನಗರಾಭಿವೃದ್ಧಿ ಇಲಾಖೆಯು ಪರಿಶೀಲಿಸುವುದು. | ನಗರಾಭಿವೃದ್ಧಿ ಇಲಾಖೆ |
| | | 2. ಗೋಪುರ ಮತ್ತು ಮೂಲಭೂತ ಸೌಕರ್ಯಗಳ ಪೂರೈಕೆದಾರರು ಎದುರಿಸುತ್ತಿರುವ ವಿದ್ಯುತ್ ಸಂಪರ್ಕಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಅಪರ ಮುಖ್ಯ ಕಾರ್ಯದರ್ಶಿಗಳು, ಇ□ಧನ ಇಲಾಖೆ, ರವರನ್ನು ರಾಜ್ಯ ಬ್ರಾಡ್ ಬ್ಯಾ□ಡ್ ಸಮಿತಿಗೆ ಸದಸ್ಯರನ್ನಾಗಿ ನೇಮಿಸಲು ಐ.ಟಿ.ಬಿ.ಟಿ. ಇಲಾಖೆಗೆ ಸೂಚಿಸಲಾಯಿತು, ಹಾಗೂ ಇನ್ನು ಮು□ದೆ ಸಂಪರ್ಕ ಗೋಪುರಗಳಿಗೆ ವಿದ್ಯುಚ್ಛಕ್ತಿ ಸಂಪರ್ಕ ನೀಡುವ ಸಂದರ್ಭದಲ್ಲಿ ಈಗಾಗಲೇ ಸ್ಥಳೀಯ ಸಂಸ್ಥೆಗಳು ನೀಡಿರುವ ಅನುಮತಿಯನ್ನು ಹೊರತುಪಿಡಿಸಿ ಬೇರೆ ಯಾವುದೇ ನಿರಾಪೇಕ್ಷಣಾ ಪತ್ರ ಕೋರದಂತೆ ಕ್ರಮ ವಹಿಸಲು ಎಲ್ಲಾ ವಿದ್ಯುಚ್ಛಕ್ತಿ ಕಂಪನಿಗಳಿಗೆ ನಿರ್ದೇಶನ ಹೊರಡಿಸಲು ಕರಡು ಪತ್ರ ಸಿದ್ಧಪಡಿಸುವಂತೆ ಐ.ಟಿ.ಬಿ.ಟಿ. ಇಲಾಖೆಗೆ ಸೂಚಿಸಲಾಯಿತು. | ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ. |

| | | | |
|---|---|---|---|
| | | 3. ರಸ್ತೆ ನಿರ್ಮಾಣ ಮಾಡುವ ಎಲ್ಲಾ ಇಲಾಖೆಗಳು ಹಾಗೂ ಪ್ರಾಧಿಕಾರಗಳು ಇನ್ನು ಮುಂದೆ "Compulsory Duct" ನಿಯಮವನ್ನು ಪಾಲಿಸುವಂತೆ ಸೂಚನೆ ನೀಡಲು ಮುಖ್ಯ ಕಾರ್ಯದರ್ಶಿಗಳು ತಿಳಿಸಿದರು. | ಅಮುಕಾ/ಐ.ಟಿ.ಬಿ.ಟಿ. |
| | | 4. ದೂರ ಸಂಪರ್ಕ ಗೋಪುರಗಳು ಹಾಗೂ Optical Fibre Cable ಗಳ ಅನುಮತಿಗೆ ಬಾಕಿ ಇರುವ ಅರ್ಜಿಗಳನ್ನು ತ್ವರಿತ ಗತಿಯಲ್ಲಿ ನಿಯಮಾನುಸಾರ ವಿಲೇ ಮಾಡಲು ಸಂಬಂಧಪಟ್ಟ ಎಲ್ಲಾ ಇಲಾಖೆ ಹಾಗೂ ಸಂಸ್ಥೆಗಳಿಗೆ ನಿರ್ದೇಶನ ಹೊರಡಿಸಲು ತಿಳಿಸಿದರು. | ಕಾ-ನಅಇ/ಪ್ರಕಾ-ಗ್ರಾಅಪ |

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**(ತ.ಮ. ವಿಜಯ್ ಭಾಸ್ಕರ್)**
ಸರ್ಕಾರದ ಮುಖ್ಯ ಕಾರ್ಯದರ್ಶಿ
ಕರ್ನಾಟಕ ಸರ್ಕಾರ

ಪ್ರತಿ: ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ.

1. ಸರ್ಕಾರದ ಅಪರ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, (ಇ-ಆಡಳಿತ), ಕರ್ನಾಟಕ ಸರ್ಕಾರ.
2. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.
3. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ಅರಣ್ಯ, ಪರಿಸರ ವಿಜ್ಞಾನ ಮತ್ತು ಪರಿಸರ ಇಲಾಖೆ.
4. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ಇಂಧನ ಇಲಾಖೆ.
5. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.
6. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
7. ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ
8. ನಿರ್ದೇಶಕರು, ಪೌರಾಡಳಿತ ಇಲಾಖೆ,
9. ನಿರ್ದೇಶಕರು, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಇಲಾಖೆ.
10. ಸಲಹೆಗಾರರು/ಹಿರಿಯ ಸಲಹೆಗಾರರು, DDG of DoT, Licensed Service Area (LSA), Karnataka
11. ಮುಖ್ಯ ಪ್ರಧಾನ ವ್ಯವಸ್ಥಾಪಕರು, ಬಿಎಸ್ಎನ್ಎಲ್.
12. ಮುಖ್ಯ ಪ್ರಧಾನ ವ್ಯವಸ್ಥಾಪಕರು, ಬಿಬಿಎನ್ಎಲ್.
13. Director General, COAI
14. Director General, TAIPA